**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**3704/2023**

ಸಿ.ಡಬ್ಲ್ಯೂ –3 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಮಹಾಂತಪ್ಪ |
| ತಂದೆಃಗಂಡ | ಃ | ಅಮೃತರಾವ ಪಾಟೀಲ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕೆರೂರ |

ದಿನಾಂಕಃ05.09.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಚಾಸಾ-1, 2, 4 ರಿಂದ 13 ಪರಿಚಯ ಇರುತ್ತದೆ. ದಿ.27.04.2023 ರಂದು ಮೃತ ಸೂರ್ಯಕಾಂತರವರು ಎತ್ತಿನ ಬಂಡಿ ತೆಗೆದುಕೊಂಡು ಬರುವಾಗ ಆರೋಪಿ ವಾಹನ ಮತ್ತು ಎತ್ತಿನ ಬಂಡಿಯ ನಡುವ ಅಪಘಾತವಾಗಿ ಸೂರ್ಯಕಾಂತ ಕೆಳಗೆ ಬಿದ್ದಿದ್ದು, ಆರೋಪಿ ರಸ್ತೆಯ ಬದಿ ಬಿದ್ದಿರುತ್ತಾರೆ. ನಂತರ ಇಬ್ಬರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮರುದಿನ ಪೋಲಿಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ.

ಸಾಕ್ಷಿಗೆ ಈಗ ಗುನ್ನೆ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-3 ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.27.04.2023 ರಂದು ನನ್ನನ್ನು ಮತ್ತು ಚಾಸಾ-2 ರವರನ್ನು ಪೋಲಿಸರು ಕರೆಯಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ತೋರಿಸಿದ ಜಾಗೆಯಲ್ಲಿ ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಪೊಲಿಸರು ದ್ವಿಚಕ್ರ ವಾಹನ ಸಂಖ್ಯೆ ಕೆಎ-32/ಇಎಫ-8758 ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಮೃತ ಸೂರ್ಯಕಾಂತರವರು ಅವರ ಹೊಲದಿಂದ ಎತ್ತಿನ ಬಂಡಿಯಲ್ಲಿ ಒಬ್ಬರೇ ಬರುತ್ತಿದ್ದರು. ಸದರಿ ಬಂಡಿಯು ಖಾಲಿ ಇತ್ತು. ಸದರಿ ರಸ್ತೆಯು ತೆಗ್ಗುಗಳಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದಾಗ ಮೃತ ಸೂರ್ಯಕಾಂತರವರು ಬಂಡಿಯಲ್ಲಿ ಇದ್ದರು ಎಂದರೆ ಸರಿ. ನಾನು ಸಮೀಪದ ರಸ್ತೆಯಲ್ಲಿ ಇದ್ದೆ ನನ್ನ ಜೊತೆ 8-10 ಜನರು ಇದ್ದರು. ದ್ವಿಚಕ್ರ ವಾಹನ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ಸದರಿ ವಾಹನದ ಮೇಲೆ ಆರೋಪಿ ಒಬ್ಬರೇ ಇದ್ದರು. ಯಾವುದೇ ಮಾಲು ಇರಲಿಲ್ಲ. ಆರೋಪಿಯು ಗಾಜಿನ ಬಳೆಯ ವ್ಯಾಪಾರ ಮಾಡುತ್ತಾನೆ ಎಂದರೆ ನನಗೆ

ಗೊತ್ತಿಲ್ಲ. ಆರೋಪಿಯು ಕಲಬುರಗಿಯಿಂದ ಬಳೆಯ ಗಂಟುಗಳನ್ನು ಇಟ್ಟುಕೊಂಡು ಬರುತ್ತಿದ್ದ ಅವನನ್ನು ತಡೆದು ನಿಲ್ಲಿಸಿ ಬಳೆಯ ಗಂಟುಗಳನ್ನು ಕಸಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿದ್ದ ಜನರು ಆರೋಪಿಗೆ ಹೊಡೆಯಲು ಬಂದಿದ್ದರು. ಅವನ ಹತ್ತಿರ ಇದ್ದ ರೂ.15,000/- ಬೆಲೆಬಾಳುವ ಬಳೆಗಳನ್ನು ಕಸಿದುಕೊಂಡು ಅವನಿಗೆ ಹೊಡೆಬಡೆ ಮಾಡಿ ಗಾಯಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಯಾವ ಆಸ್ಪತೆರಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಗೊತ್ತಿಲ್ಲ ಆದರೆ ಮೃತ ಸೂರ್ಯಕಾಂತ ಮತ್ತು ಆರೋಪಿಯ್ನು ಕಲಬುರಗಿಗೆ ತೆಗೆದುಕೊಂಡು ಹೋಗಿರುತ್ತಾರೆ. ಮರುದಿನ ಬೆಳಗ್ಗೆ 10.00 ಗಂಟೆಗೆ ಪೋಲಿಸರು ಬಂದಿರುತ್ತಾರೆ. ನನ್ನನ್ನು ಚಾಸಾ-4 ರವರು ಕರೆದಿರುತ್ತಾರೆ. ನಾವು ಅಪಘಾತದ ಸ್ಥಳಕ್ಕೆ ಹೋದಾಗ ದ್ವಿಚಕ್ರ ವಾಹನ ಅಲ್ಲೇ ಇತ್ತು. ಘಟನೆಯಾದ ಸ್ಥಳ ನಾನೇ ಪೋಲಿಸರಿಗೆ ತೋರಿಸಿರುತ್ತೇನೆ. ಘಟನಾ ಸ್ಥಳದಲ್ಲಿ ರಕ್ತ ಬಿದ್ದಿತ್ತು. ಸದರಿ ರಕ್ತವು ರಸ್ತೆಯ ಮೇಲೆ ಬಿದ್ದಿತ್ತು ಕಲ್ಲಿನ ಮೇಲೆ ಬಿದ್ದಿಲ್ಲ. ಪೋಲಿಸರು ಸ್ದಳದ ಫೋಟೋ ತೆಗೆದಿರುತ್ತಾರೆ. ಪೋಲಿಸರು ಒಂದು ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಇದ್ದರು. ಸಾಮಾನ್ಯವಾಗಿ ಬಂಡಿಯ ಹಿಂದೆ ಅಪಘಾತವಾದರೆ ಮುಂದೆ ಕುಳಿತವರಿಗೆ ಎನು ಆಗುವುದಿಲ್ಲ ಎಂದರೆ ಸರಿಯಲ್ಲ. ಮೃತ ಸೂರ್ಯಕಾಂತ ಯಾವುದೇ ಬಂಡಿ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ವಾಹನವು ಅಪಘಾತಪಡಿಸಿಹೋಗಿದ್ದು ಹಿಂದೆ ಇದ್ದ ಆರೋಪಿ ವಾಹನ ಹಿಡಿದುಕೊಂಡು ನಾವು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಇದೇ ಮೋದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಚಾಸಾ-1 ರವರು ನಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.